ರಿಸುವವರಿಲ್ಲದೆ, ಯಾರನ್ನೂ ನೋಡಲೂ ಆಗದ ಸ್ಥಿತಿಯಲ್ಲಿ ಅವನು ತನ್ನ ಬಾಳನ್ನು ನಡೆಸಿದನು. ಈ ಕಾಲದಲ್ಲಿ ಅವನ ಭಗವದ್ದರ್ಶನದ ಅನುಭವಗಳು ಇನ್ನೂ ಹೆಚ್ಚಾಗುತ್ತ ಹೋದವು. ಭಗವದುನ್ಮಾದದ ಅವಸ್ಥೆಯು ಇನ್ನೂ ತೀವ್ರವಾಗುತ್ತ ಹೋಯಿತು. ದಡ್ಡನೆಂದು ಪರಿಗಣಿಸಿದ್ದ ಈ ಸಂತನು ಪ್ರತಿಕ್ಷಣವೂ ಭಗವದಾನಂದವನ್ನು ಅನುಭವಿಸುತ್ತಿದ್ದನು.

ಅವನ ಕೊನೆಗಾಲ ಸಮೀಪಿಸಿತು. ೧೬೬೩ರ ಆಗಸ್ಟ್ ೧೦ರಂದು ಅವನು ವಿಪರೀತ ಜ್ವರಕ್ಕೆ ತುತ್ತಾದನು. ಆದರೂ ಪ್ರತಿನಿತ್ಯ ಮುಂಜಾನೆ ಪ್ರಾರ್ಥನೆಯನ್ನು ಆಲಿಸಲು ಏಳುತ್ತಿದ್ದನು. ೧೬೬೩ರ ಸೆಪ್ಟೆಂಬರ್ ೧೮ ಕ್ರೈಸ್ತರ ಒಂದು ಪವಿತ್ರ ದಿನ. ಅಂದು ಜೋಸೆಫ್ ಎಂದಿಗಿಂತಲೂ ಹೆಚ್ಚಾಗಿ ಭಗವೋನ್ಮಾದವನ್ನು ಅನುಭವಿಸಿದನು. ಎಂದು ತಾನು ಬೆಳಗಿನ ಸಮಯದ ಪ್ರಾರ್ಥನಾ ಸಭೆಯಲ್ಲಿ ಪಾಲ್ಗೊಳ್ಳಲು ಆಗುವುದಿಲ್ಲವೋ ಅಂದು ಜೀವ ಬಿಡುವೆ ಎಂದು ಮೊದಲೇ ಭವಿಷ್ಯ ನುಡಿದಿದ್ದನು. ಅಂದಿನ ದಿನ ಎಷ್ಟೇ ಪ್ರಯತ್ನಿಸಿದರೂ, ಅವನಿಗೆ ಎದ್ದೇಳಲು ಸಾಧ್ಯವಾಗಲಿಲ್ಲ. ಅಲ್ಲಿ ನೆರೆದಿದ್ದವರಿಗೆ ಅವನು ಒಂದು ಮನವಿಯನ್ನು ಮಾಡಿದನು. ತನ್ನ ದೇಹವನ್ನು ಯಾವುದಾದರೂ ರಸ್ತೆಬದಿಯಲ್ಲಿ, ಯಾರಿಗೂ ತಿಳಿಯಬರದಂತೆ ಹೂತುಬಿಡಿ ಎನ್ನುವುದೇ ಆ ಮನವಿ. ತಾನು ನಿಧನಹೊಂದಿದ ನಂತರ, ಎಲ್ಲರೂ ತನ್ನನ್ನು ಮರೆತುಬಿಡಬೇಕು ಎನ್ನುವುದೇ ಅವನ ಇಚ್ಛೆಯಾಗಿತ್ತು.

ಕಡೆಯ ಕ್ಷಣದಲ್ಲಿ ಅವನ ಭಗವದುನ್ಮಾದ ಇನ್ನೂ ಉತ್ಕಟವಾಯಿತು. ಅವನು ಕ್ರಿಸ್ತನ ಪ್ರಾರ್ಥನೆಯನ್ನು ಸತತವಾಗಿ ಉಚ್ಚರಿಸುತ್ತಿದ್ದನು. ಸಂತ ಪಾಲನ ಉಕ್ತಿಯನ್ನು ಮತ್ತೆ ಮತ್ತೆ ಹೇಳುತ್ತಿದ್ದನು. 'ನಾನು ಕ್ರಿಸ್ತನಲ್ಲಿ ಐಕ್ಯವಾಗಲು ಇಚ್ಛಿಸುತ್ತೇನೆ' ಎನ್ನುವುದೇ ಆ ಉಕ್ತಿ. ಪಕ್ಕದಲ್ಲಿ ಕುಳಿತಿದ್ದವರು ಭಗವತ್ಪ್ರೇಮದ ವಿಷಯವನ್ನು ಎತ್ತಿದರು. ''ಹೌದು, ಹೌದು, ಇದನ್ನು ಮತ್ತೂ ಹೇಳು, ಮತ್ತೂ ಹೇಳು'' ಎಂದು ಜೋಸೆಫನು ಕೂಗಿಕೊಂಡನು. ಅವನು ಏಸುಕ್ರಿಸ್ತನ ಪವಿತ್ರ ನಾಮವನ್ನು ಮತ್ತೆ ಮತ್ತೆ ಉಚ್ಚರಿಸಿದನು. ''ಭಗವಂತನಿಗೆ ಜಯವಾಗಲಿ, ಭಗವಂತನಿಗೆ ಶುಭವಾಗಲಿ, ಭಗವಂತನ ಪವಿತ್ರ ಇಚ್ಛೆಯು ಪೂರ್ತಿಯಾಗಲಿ'' ಎಂದು ಉದ್ಘೋಷಿಸಿದನು. ಅವನ ಹಳೆಯ ಮುಗ್ಧ ನಗು ಮರುಕಳಿಸಿ ಬಂತು. ಅವನ ನಗು ಸುತ್ತ ನೆರೆದಿರುವವರನ್ನು ಹಸನ್ಮುಖರನ್ನಾಗಿ ಮಾಡಿತು. ಹೀಗೆ ನಗುನಗುತ್ತ ಈ ದೀನ ಸಂತನು ಕ್ರಿಸ್ತನ ಪಾದವನ್ನು ಮುಟ್ಟಿದನು. ಆಗ ಅವನಿಗೆ ಕೇವಲ ೬೦ ವರ್ಷ ವಯಸ್ಸಾಗಿತ್ತು. ಇದಾಗಿ ಸರಿಯಾಗಿ ನೂರು ವರ್ಷಗಳ ನಂತರ, ೧೭೭೩ರಲ್ಲಿ ಕ್ಯಾಥೊಲಿಕ್ ಚರ್ಚ್ ಜೋಸೆಫ್‌ನನ್ನು 'ಸಂತ' ನೆಂದು ಗೌರವಿಸಿತು. ಹೀಗೆ ದೀನ ಜೋಸೆಫ್ ಕ್ಯುಪರ್‌ಟಿನೋ 'ಸಂತ ಜೋಸೆಫ'ನಾದನು; ಪ್ರಭು ಏಸುವಿನ ಹೆಸರಿನಲ್ಲಿ 'ಧನ್ಯ'ನಾದನು.

ಜಪಾನಿನ ಕಥೆಗಳು

# ಚಂದ್ರಕುಮಾರಿ

ಬಂಗಾಳಿ ಮೂಲ : **ರಾಜಕೃಷ್ಣ ಭಟ್ಟಾಚಾರ್ಯ** | ಚಿತ್ರ : **ಜುಂಕೋ ಭಟ್ಟಾಚಾರ್ಯ** | ಕನ್ನಡಾನುವಾದ : **ಗಿರಿಜಾದೇವಿ**



ಇದೊಂದು ಪುರಾತನ ಕಾಲದ ಕತೆ. ಹಸಿರು ಎಲೆಗಳಿಂದ ಕೂಡಿ ದಟ್ಟವಾಗಿ ಬೆಳೆದ ಬಿದಿರು ಮೆಳೆಗಳಿಂದ ತುಂಬಿದ ಕಾಡಿನ ಅಂಚಿನಲ್ಲಿ ಒಬ್ಬ ಮುದುಕಿ ಮತ್ತು ಮುದುಕ ವಾಸವಾಗಿದ್ದರು. ಮುದುಕ ಬಿದಿರು ಕಡಿಯಲು ಪ್ರತಿದಿನವೂ ಕಾಡಿಗೆ ಹೋಗುತ್ತಿದ್ದ. ಬಿದಿರು ಮಾರಿ ಅವರ ಜೀವನ ಸಾಗಿತ್ತು. ಒಂದು ದಿನ ಬಿದಿರು ಕಡಿಯಲು ಹೋದ ಮುದುಕ ಒಂದು ಬಿದಿರಿನ ಮಧ್ಯೆ ಆಕರ್ಷಕವಾದ ಬೆಳಕಿನ ಪ್ರಭೆಯನ್ನು ಕಂಡನು. ಆಗ ಇಳಿಹೊತ್ತು. ಆ ರೀತಿಯ ಬೆಳಕನ್ನು ಅವನು ಹಿಂದೆಂದೂ ಕಂಡಿರಲಿಲ್ಲ. ಮುದುಕ ಬಹು ಎಚ್ಚರಿಕೆಯಿಂದ ಆ ಬಿದಿರನ್ನು ಕಡಿದ. ಆಶ್ಚರ್ಯ! ಬಿದಿರಿನೊಳಗೆ ಅತ್ಯಂತ ಸುಂದರವಾದ ಚಿಕ್ಕ ಹೆಣ್ಣುಮಗುವೊಂದು ಇತ್ತು. ಇವನಿಗೆ ಮಕ್ಕಳಿರಲಿಲ್ಲ. ಈ ಮಗುವನ್ನು ಕಂಡು ಅವನಿಗೆ ಬಹಳ ಸಂತೋಷವಾಯಿತು. ಮಗುವನ್ನು ಅತ್ಯಂತ ಪ್ರೀತಿಯಿಂದ ಎತ್ತಿಕೊಂಡು ಮನೆಗೆ ಬಂದ. ಮುದುಕಿ ಮಗುವನ್ನು ಆದರದಿಂದ ಸ್ವಾಗತಿಸಿದಳು. ಮುದುಕ ಮತ್ತು ಮುದುಕಿ ಮಗುವನ್ನು ಬಹು ಎಚ್ಚರಿಕೆಯಿಂದ, ಪ್ರೀತಿ

ಯಿಂದ, ಲಾಲನೆ ಪಾಲನೆ ಮಾಡಿ ಬೆಳೆಸ ತೊಡಗಿದರು. ಮತ್ತೂ ಒಂದು ವಿಚಿತ್ರ ವೆಂದರೆ, ಮುದುಕ ಬಿದಿರು ಕಡಿಯಲು ಕಾಡಿಗೆ ಹೋದಾಗಲೆಲ್ಲ ಬಿದಿರಿನ ಮಧ್ಯೆ ಒಂದಲ್ಲ ಒಂದು ಬೆಲೆಬಾಳುವ ಉಡುಗೊರೆ ಅವನಿಗೆ ಸಿಗುತ್ತಿತ್ತು. ಚಿನ್ನ ಬೆಳ್ಳಿಯ ರೂಪಾಯಿ ಗಳಿಂದ ಪ್ರಾರಂಭವಾಗಿ ಎಷ್ಟೋ ವಿಧದ ಲೆಕ್ಕಕ್ಕೆ ಸಿಗದಷ್ಟು ಪದಾರ್ಥಗಳನ್ನು ಮುದುಕ ಪಡೆ ದಿದ್ದ. ಹೀಗೆ ಇವರು ನಿರ್ಯೋಚನೆಯಿಂದ, ಆನಂದದಿಂದ ದಿನ ಕಳೆಯುತ್ತಿದ್ದರು. ಇದೆ ಲ್ಲವೂ ತಮಗೆ ದೊರೆತ ಅಪೂರ್ವ ಶಿಶುವಿನ ಮಹಿಮೆಯಿಂದಲೇ ಎಂದು ಅವರಿಗೆ ತಿಳಿ ದಿತ್ತು. ಮುದುಕ ಮುದುಕಿ ಸುಂದರವಾದ ಈ ಮಗುವಿಗೆ 'ಚಂದ್ರಕುಮಾರಿ' ಎಂದು ನಾಮಕರಣ ಮಾಡಿದ್ದರು. ಚಂದ್ರನ ಬೆಳಕಿ ನಂತೆ ಬೆಳಕು ಚಿಮ್ಮುತ್ತಾ ಬಂದ ಕಾರಣ ಅವ ಳಿಗೆ ಈ ಹೆಸರನ್ನು ಇಡಲಾಗಿತ್ತು. ಚಂದ್ರ ಕುಮಾರಿ ಅಪರೂಪದ ಸುಂದರಿ ಎಂದು ಎಲ್ಲರೂ ಮಾತನಾಡಿಕೊಳ್ಳುತ್ತಿದ್ದರು. ಅವಳ ರೂಪಕ್ಕೆ ಮರುಳಾದ ಅನೇಕ ಯುವಕರು ಅವಳನ್ನು ವಿವಾಹ ವಾಗಲು ಆಶಿಸಿದರು. ಆದರೆ ಅವಳಿಗೆ ಮದುವೆಯಾಗಲು ಇಷ್ಟವಿರ ಲಿಲ್ಲ. ಆದ್ದರಿಂದ, ಮದುವೆಯಾಗಲು ಬಯಸಿ ಬಂದ ಯುವಕರಿಗೆ ಬಹು ಕಠಿಣತರವಾದ ಕೆಲಸಗಳನ್ನೂ, ಯಾರಿಂದಲೂ ಮಾಡಲಾಗದ ಕೆಲಸಗಳನ್ನೂ ಮಾಡಲು ಹೇಳುತ್ತಿದ್ದಳು. ಆ ಕೆಲಸ ಮಾಡಲಾರದೆ ಸೋತವರನ್ನು ಅವಳು ಮದುವೆಯಾಗಲು ನಿರಾಕರಿಸುತ್ತಿದ್ದಳು. ಈ ರೀತಿ ಕೆಲವು ದಿನಗಳು ಕಳೆದ ಮೇಲೆ ಎಲ್ಲರಿಗೂ ಅರ್ಥವಾಯಿತು, ಅವಳಿಗೆ ಮದುವೆಯಾಗಲು ಇಚ್ಛೆ ಯಿಲ್ಲ – ಎಂದು. ಮುದುಕ, ಮುದುಕಿ ಈ ವಿಷಯದಲ್ಲಿ ಮತ್ತೆ ಚಂದ್ರಕುಮಾರಿಗೆ ಬೇಸರ ಉಂಟು ಮಾಡಲಿಲ್ಲ. ಅವಳ ಮದುವೆ ವಿಷಯ ವನ್ನು ಕೈಬಿಟ್ಟರು. ಆದರೆ ಚಂದ್ರ ಕುಮಾರಿ ಕೆಲವು ದಿನಗಳಿಂದ ಆಗಾಗ ಅಳುತ್ತಿದ್ದಳು. ಅವಳ ಕಣ್ಣುಗಳಲ್ಲಿ ನೀರು ಕಂಡ ಮುದುಕ ದುಃಖದಿಂದ ಒಂದು ದಿನ ವಿಚಾರಿಸಿದ, ''ಚಂದ್ರ ಕುಮಾರಿ, ನೀನು ಅಳುವುದೇಕೆ ಮಗು?'' ಅದಕ್ಕೆ ಅವಳು ಹೇಳಿದಳು, ''ಹುಣ್ಣಿಮೆ ಹತ್ತಿರ ಬರುತ್ತಿದೆ. ನಾನು ಹೊರಟು ಹೋಗಬೇಕಾಗಿದೆ. ನಿಮ್ಮ ಮೇಲೆ ನನಗೆ ಬಹಳ ಪ್ರೀತಿಯುಂಟಾ ಗಿದೆ, ನಿಮ್ಮನ್ನು ಬಿಟ್ಟು ಹೋಗುವುದು ನನಗೆ ಕಷ್ಟವೂ ಸಂಕಟಮಯವೂ ಆಗಿದೆ.'' ಇವಳ ಮಾತುಗಳನ್ನು ಕೇಳಿ ಮುದುಕಿ ಅವಾಕ್ಕಾದಳು. ಒತ್ತಿಕೊಂಡು ಬಂದ ದುಃಖವನ್ನು ತಡೆದುಕೊಳ್ಳುತ್ತಾ ಪ್ರಶ್ನಿಸಿದಳು, ''ಮಗೂ, ನಮ್ಮನ್ನು ಬಿಟ್ಟು ನೀನು ಎಲ್ಲಿಗೆ ಹೋಗುತ್ತೀಯೆ?'' ಚಂದ್ರಕುಮಾರಿ ಉತ್ತರ ಕೊಟ್ಟಳು, ''ನಾನು ನಿಜಕ್ಕೂ ಚಂದ್ರನ ಮಗಳೇ ಹೌದು. ಚಂದ್ರಲೋಕದಿಂದ ನಿಮಗೆ ಆನಂದವನ್ನುಂಟುಮಾಡಲೆಂದೇ ಇಲ್ಲಿಗೆ ಬಂದೆ. ಭೂಲೋಕ ದಲ್ಲಿ ನನ್ನ ವಾಸದ ದಿನಗಳು ಮುಗಿಯುತ್ತಾ ಬಂದವು. ನಾನು ಮತ್ತೆ ಚಂದ್ರಲೋಕಕ್ಕೇ ವಾಪಸ್ಸು ಹೋಗಬೇಕಾಗಿದೆ. ಬರುವ ಹುಣ್ಣಿ ಮೆಯ ದಿನ ಚಂದ್ರಲೋಕದಿಂದ ದೂತರು ಬರುತ್ತಾರೆ, ನನ್ನನ್ನು ಕರೆದುಕೊಂಡು ಹೋಗಲು.'' ಮುದುಕ ಮುದುಕಿಯರು ಇವಳ ಮಾತು ಕೇಳಿ ದುಃಖಭರಿತರಾದರು. ಇವರು ಎಲ್ಲಾ ಸಮಯ ದಲ್ಲಿಯೂ ಅವಳೊಂದಿಗೇ ಇರುತ್ತಿದ್ದರು ಮತ್ತು ಅವಳನ್ನು ಬಹಳ ವಾಗಿ ಆದರಿಸಿ ಪ್ರೀತಿಸುತ್ತಿದ್ದರು. ಹುಣ್ಣಿಮೆಯ ದಿನ ಬಂದೇ ಬಿಟ್ಟಿತು. ಬೆಳಗಿನಿಂದಲೇ ವಿಧವಿಧವಾದ ತಿಂಡಿ ಪದಾರ್ಥಗಳನ್ನು ತಯಾರಿಸಿ, ಅವಳಿಗೆ ತಿನ್ನಿಸಿ, ದಿನವನ್ನು ಆನಂದದಿಂದ ಕಳೆದರು. ತಮ್ಮ ಮಗಳು ಮಾವನ ಮನೆಗೆ ಹೊರಟುಬಿಡುತ್ತಾಳೆನ್ನುವ ಭಾವನೆ ಅವರದು. ಆದ್ದರಿಂದ ಮನಸ್ಸಿನ ದುಃಖವನ್ನು ಮನಸ್ಸಿನಲ್ಲೇ ಅಡಗಿಸಿ ಇಟ್ಟುಕೊಂಡರು. ಹುಣ್ಣಿಮೆಯ ಚಂದ್ರ ಆಕಾಶದಲ್ಲಿ ಮೂಡುತ್ತಿದಂತೆಯೇ ಚಂದ್ರಲೋಕದಿಂದ ದೂತರು ಬಂದರು. ಈಗ ಬೀಳ್ಕೊಳ್ಳುವ ಸಮಯ. ಚಂದ್ರಕುಮಾರಿಯನ್ನು ಅಕ್ಕರೆಯಿಂದ ಅಪ್ಪಿಕೊಂಡು ಮುತ್ತಿಟ್ಟು ವಿದಾಯ ಹೇಳಿದರು. ಮುದುಕ ಮುದುಕಿ ಕಣ್ಣೀರು ಸುರಿಸುತ್ತಾ ನಿಂತರು. ಚಂದ್ರಕುಮಾರಿ ದೂತರೊಂದಿಗೆ ಚಂದ್ರಲೋಕಕ್ಕೆ ಹೊರಟುಹೋದಳು. ಮುದುಕ, ಮುದುಕಿ ಚಂದ್ರನತ್ತ ನೋಡುತ್ತಲೇ ಇದ್ದುಬಿಟ್ಟರು.



